ಬೆಂಗಳೂರು ನಗರದ ಕನ್ಸರ್‌ವೆನ್ಸಿ ರಸ್ತೆಗಳ ಉಪಯೋಗ.

2207(2912)

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ವಿವಿಧ ಬಡಾವಣೆಗಳಲ್ಲಿನ ಕನ್ಸರ್‌ವೆನ್ಸಿ ರಸ್ತೆಗಳಲ್ಲಿ ಕಸವನ್ನು ತೆಗೆಯಲು ಮಹಾನಗರ ಪಾಲಿಕೆ ಆಗಿಂದಾಗ್ಗೆ ಲಕ್ಷಾಂತರ ರೂ.ಗಳ ಹಣವನ್ನು ವಿನಿಯೋಗಿಸುತ್ತಿರುವುದು ನಿಜವೇ? ಹಾಗಿದ್ದಲ್ಲಿ, ಪ್ರತಿ ವರ್ಷ ಈ ನಿಟ್ಟಿನಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗುತ್ತಿದೆ?

ಆ) ಲಕ್ಷಾಂತರ ರೂ.ಗಳ ಹಣ ವಿನಿಯೋಗಿಸಿ ಸ್ವಚ್ಛಗೊಳಿಸುತ್ತಿರುವ ಈ ಕನ್ಸರ್‌ವೆನ್ಸಿ ರಸ್ತೆಗಳಲ್ಲಿ ಜನೋಪಯೋಗಿ ಪ್ರದೇಶವನ್ನಾಗಿ ಮಾಡಿ, ಸಣ್ಣ ಪುಟ್ಟ ವ್ಯಾಪಾರಸ್ಥರಿಗೆ ಬಾಡಿಗೆಗೆ ನೀಡುವಂತಹ ಯೋಜನೆಯನ್ನು ಸರ್ಕಾರ ಪರಿಶೀಲಿಸುವುದೇ?

ಇ) ಈ ಬಗ್ಗೆ ಮಹಾನಗರ ಪಾಲಿಕೆ ಹಮ್ಮಿಕೊಳ್ಳಲಿರುವ ಯೋಜನೆಯ ರೂಪುರೇಷೆಗಳೇನು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):

ಅ) ಕನ್ಸರ್‌ವೆನ್ಸಿ ರಸ್ತೆಗಳಲ್ಲಿನ ಕಸವನ್ನು ತೆಗೆಯಲು ಪ್ರತ್ಯೇಕವಾದ ಹಣವನ್ನು ವಿನಿಯೋಗಿಸಿರುವುದಿಲ್ಲ.

ಆ ಮತ್ತು ಇ) ಹೆಚ್ಚು ಸಂಚಾರ ಒತ್ತಡವಿರುವ ಕಡೆ ಕನ್ಸರ್‌ವೆನ್ಸಿ ರಸ್ತೆಗಳಲ್ಲಿ ದ್ವಿಚಕ್ರವಾಹನ ನಿಲುಗಡೆ ಮಾಡುವ ಬಗ್ಗೆ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ. ಆದಾಗ್ಯೂ ಅಂಗಡಿಗಳನ್ನು ಸಣ್ಣ ಪುಟ್ಟ ವ್ಯಾಪಾರಸ್ಥರಿಗೆ ಬಾಡಿಗೆಗೆ ನೀಡುವ ಯಾವುದೇ ಪ್ರಸ್ತಾವನೆಯು ಇರುವುದಿಲ್ಲ.

ಬೆಂಗಳೂರು ನಗರದಲ್ಲಿರುವ ದೊಡ್ಡ ಚರಂಡಿಗಳನ್ನು ಡೆಕ್ ಸ್ಲ್ಯಾಬ್‌ಹಾಕಿ ಮುಚ್ಚುವುದರ ಬಗ್ಗೆ.

2208(2913)

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ): ಮಾನ್ಯ ಮುಖ್ಯಮಂತ್ರಿಗಳು ಈ